8. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ: ಸಾರಿಗೆ ಆಯುಕ್ತರು ಏಜೆಂಟರುಗಳ ಒಂದು ಜಾಲದ ಜೊತೆಯಲ್ಲಿ ಮಾತನಾಡಿರುವ ಬಗ್ಗೆ.

ಶ್ರೀ ಎನ್. ಧರಂಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಈಗ ನಿಲುವಳಿ ಸೂಚನೆಯನ್ನು ಮಂಡಿಸಿದ್ದೇವೆ. ಇದರಲ್ಲಿ ಮುಖ್ಯಮಂತ್ರಿಗಳು ಮತ್ತು ಅವರ ಪಕ್ಷದ ಶಾಸಕರೂ ಕೂಡ ಈ ಒಂದು ಫೋಟೋಸ್ ತೋರಿಸುವುದನ್ನು ಮಾಡಿದರು. ಕೊನೆಗೆ ಮಾನ್ಯ ವೆಂಕಟೇಶ್‌ರವರು ನಾನು ಆ ರೀತಿ ಹೇಳಲಿಲ್ಲವೆಂದು ಕ್ಷಮೆ ಕೋರಿರುವುದಾಗಿ ಹೇಳಿದ್ದರಿಂದ ಈ ವಿಷಯವನ್ನು ಅಲ್ಲಿಗೆ ಬಿಡುತ್ತಿದ್ದೇವೆ. ಆದರೆ ಇವತ್ತು ನಾವು ಏನು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದೇವೆ. ಯಾವ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದ್ದೇವೆ. ಅದರ ಬಗ್ಗೆ ತಾವು ತೀರ್ಮ ಕೊಟ್ಟಿಲ್ಲ. ಇವತ್ತು ಅದರ ಬಗ್ಗೆ ತೀರ್ಮ ಕೊಡಬೇಕು ಮತ್ತೆ ಹಗುರವಾಗಿ ರೂಮಿನಲ್ಲಿ ಏನೋ ಒಂದು ಫೋಟೋ ಬಂದು ಬಿದ್ದಿತ್ತು ಎಂದು ಬಿಡುವುದು ಅಲ್ಲ. ಇದರ ಬಗ್ಗೆ ಈಗಾಗಲೇ ಮಾನ್ಯ ದೇಶಪಾಂಡೆಯವರು, ಖರ್ಗೆಯವರು ಹೇಳಿದ ಹಾಗೆ, ರಮೇಶ್‌ಕುಮಾರ್‌ರವರು ಹೇಳಿದ್ದಾರೆ, ಇದರ ಹಿಂದೆ ಏನೋ ಹಿನ್ನೆಲೆ ಇದೆ. ಇದಕ್ಕೆ ಈ ರೀತಿಯಾದ ಕೆಲಸ ಮಾಡತಕ್ಕಂಥದ್ದರಲ್ಲಿ ಸರ್ಕಾರದ ಜನ ಬಹಳ ನಿಸ್ಸೀಮರಾಗಿದ್ದಾರೆ. ಮಾನ್ಯ ರೇವಣ್ಣನವರು ನೋಡುತ್ತಿದ್ದಾರೆ. ನಾನು ಮಾತನಾಡಿದ ಮೇಲೆ ನೀವು ಮಾತನಾಡಿ. ಈಗ ರಾಜ್ಯದಲ್ಲಿ ನಾವೆಲ್ಲಾ ಕಡೆಗೆ ಶಕ್ತಿ ಕೊಡಲಿಕ್ಕೆ ನಮಗೆ ಸಾಧ್ಯವಿದೆ. ಆ ಶಕ್ತಿಗೆ ಪ್ರತಿಯಾಗಿ ಇವತ್ತು ಏನಾದರೂ ಅವರ ಮೇಲೆ ಗೂಬೆ ಕೂರಿಸುವಂಥ ಕೆಲಸ ಮಾಡಬೇಕೆಂದು ಮಾಡಿದರೆ, ನಾವೂ ಕೂಡ ಮಾಡಬಹುದು. ಏಕೆ ಮಾನ್ಯ ವೆಂಕಟೇಶ್ ಒಬ್ಬರೇ ಸಿಕ್ಕರೆ ನಿಮಗೆ ಮಾನ್ಯ ವೆಂಕಟೇಶ್‌ರವರು ವೀರಣ್ಣನವರ ಮಗ ಎಂದು ಹೇಳುತ್ತಿದ್ದೇನೆ. ವೀರಣ್ಣನವರು ವಿಧಾನಪರಿಷತ್ತಿನಲ್ಲಿ ಯಾವ ರೀತಿಯಾಗಿ ನಡೆದುಕೊಂಡಿದ್ದಾರೆ. ಏಕೆ ನೀವು ಈ ರೀತಿ ಕೆಲಸ ಮಾಡುತ್ತಿದ್ದೀರಿ. ಈ ಜನ ಏನಿದ್ದಾರಲ್ಲಾ ಅಧಿಕಾರ ಇರತಕ್ಕಂಥ ಜನ ಮಾನ್ಯ ವೆಂಕಟೇಶ್ ಅಂತಹವರು, ಮಾನ್ಯ ಚೆಲುವರಾಯಸ್ವಾಮಿ ಕೈ ಮಾಡಿದರೆ ಎಲ್ಲಾ ಬರುತ್ತಾರೆ, ನೋಡಿದ್ದೇವೆ. ಸ್ಪಷ್ಟವಾಗಿ ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವತ್ತು CNNIBN ಯಲ್ಲಿ ಮುಖ್ಯಮಂತ್ರಿಗಳೂ ಆ ಟ್ರಾನ್ಸ್‌ಪೋರ್ಟ್ ಕಮಿಷನರ್‌ರವರು ಹಣ ತೆಗೆದುಕೊಂಡಿರುವ ಮಾತು ಬಂದ ಮೇಲೆ, ಇದು ನಮ್ಮ ಕರ್ತವ್ಯವಾಗುತ್ತದೆ. ರಾಜ್ಯದ ಜನತೆಗೆ ಒಂದು ಸ್ಪಷ್ಟವಾದಂತಹ ಹೇಳಿಕೆಯನ್ನು ಸರ್ಕಾರ ಕೊಡಬೇಕಾಗುತ್ತದೆ. ಅದನ್ನು ನಾನು ಕೇಳಿದ್ದೇನೆ. ಮಾನ್ಯ ವೆಂಕಟೇಶ್‌ರವರು ಆ ವಿಚಾರಕ್ಕೆ ಕ್ಷಮೆ ಕೇಳಿದ್ದಾರೆ, ಅದು ಅಲ್ಲಿಗೆ ಮುಕ್ತಾಯವಾಗಿದೆ, ಆದರೆ ಸಿ.ಡಿ. ಹೇಗೆ ಬಂತು ಹೇಗೆ ಹೋಯಿತು? ನೀವು ಇವತ್ತು ಸಭಾಧ್ಯಕ್ಷರಾಗಿ ಸದನ

ನಡೆಸುತ್ತಿದ್ದೀರಿ. ಶಾಸಕರ ಕೋಣೆಯಲ್ಲಿ ಈ ತರಹದ ಫೋಟೋ ಬೀಳತಕ್ಕಂಥದ್ದು ಏನು ಕೆಲಸವಾಗಿದೆ, ಅದರ ಬಗ್ಗೆ ಸಮಗ್ರವಾದ ತನಿಖೆ ಮಾಡಬೇಕು. ಅದಕ್ಕಿಂತಲೂ ಹೆಚ್ಚಾಗಿ ತಾವು ಆ ವಿಷಯದ ಬಗ್ಗೆ ತಿಳಿದುಕೊಳ್ಳತಕ್ಕಂಥ ಕೆಲಸವಾಗಬೇಕು. ಇನ್ನು ಮುಂದೆ ಆ ರೀತಿಯಾಗಬಾರದು ಎನ್ನತಕ್ಕಂಥ ರೀತಿಯಲ್ಲಿ ನೀವು ಕ್ರಮ ಕೈಗೊಳ್ಳಬೇಕು. ನಾನೇನು ಮಾಡಲಿ ಬಿದ್ದರೆ ಎನ್ನತಕ್ಕಂಥದ್ದಲ್ಲ. ಇವತ್ತು ಈ ರೀತಿ ಅನಾಹುತಗಳಾಗಿವೆ. ಐದಾರು ಗಂಟೆಗಳ ಕಾಲ ಕಾಲಹರಣ ಕೂಡ ಆಗಿದೆ. ಬಹಳಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ಈಗ ಮಾನ್ಯ ಪ್ರಕಾಶ್‌ರವರೇ, you are running the Government. You have got major responsibility. ಇವತ್ತು ಸರ್ಕಾರ ನಡೆಸುವವರಿಗೆ ಹೆಚ್ಚಿನ ಜವಾಬ್ದಾರಿಯಿದೆ, ಸರ್ಕಾರ ನಡೆಸತಕ್ಕಂಥ ನೀವೇ ಎಲ್ಲಾ ಶಾಸಕರಿಗೆ ಈ ರೀತಿ ಪರಿಸ್ಥಿತಿ ನಿರ್ಮಾಣ ಮಾಡಿದರೆ, ಯಾವ ತರಹದ ಸರ್ಕಾರವಿದು. ಇವತ್ತು ಮುಂದಾಲೋಚನೆ ನಿಮಗೆ ಹೆಚ್ಚಿರಬೇಕು. ಇವತ್ತು ನಾವು ಕೇಳುತ್ತೇವೆ ಅದರ ಬಗ್ಗೆ ಹೇಳಬೇಕು, ಅದನ್ನು ಹೇಳತಕ್ಕಂಥ ರೀತಿಯಲ್ಲಿ ಬೇರೆ ಕಡೆಗೆ ಕೂಡ ಡೀವಿಯೇಟ್ ಮಾಡತಕ್ಕಂಥ ಕೆಲಸ ಮಾಡುತ್ತೀರಿ. ಇದು ನಿಮ್ಮ ಸರ್ಕಾರಕ್ಕೆ ಶೋಭೆ ತರತಕ್ಕಂಥದ್ದಲ್ಲ. ಇವತ್ತು ನಿಲುವಳಿ ಸೂಚನೆಯನ್ನೇನು ಮಂಡಿಸಿದ್ದೇವೆ, ನಾವು ವಿರೋಧಪಕ್ಷದ ನಾಯಕರಾಗಿ ನಮ್ಮೆಲ್ಲರ ಶಾಸಕರ ಪರವಾಗಿ ನಿಲುವಳಿ ಸೂಚನೆಯಲ್ಲಿ ಯಾಪ್ಯಾವ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ಅಧ್ಯಕ್ಷರು ತೀರ್ಪು ಕೊಡಬೇಕು, ಇಲ್ಲದಿದ್ದರೆ ನಮಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕು.

(ಅಡಚಣೆ)

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು): ಮಾನ್ಯ ಧರಂಸಿಂಗ್‌ರವರು ಇದನ್ನು ಪ್ರಸ್ತಾಪ ಮಾಡುವ ಕಾಲದಲ್ಲಿ ಒಂದು small mistake ಆಯಿತು, ಅದನ್ನು we want to set right the record. ಅವರು ಏನು ಹೇಳಿದರೆಂದರೆ ಮುಖ್ಯಮಂತ್ರಿಗಳು ಹಣ ಪಡೆದಿರುವ ವಿಚಾರ ಇದೆಯೆಂದು ಹೇಳಿದರು ಟ್ರಾನ್ಸ್‌ಪೋರ್ಟ್ ಕಮೀಷನರ್‌ರವರು. That is not correct. As per the record, ಅವರು ಯಾವುದೋ ಒಂದು ಸನ್ನಿವೇಶದಲ್ಲಿ ಅವರ ಆಶೀರ್ವಾದ ಇದೆಯೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದಾರೆ. ಅದನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ನಾವು ವಿರೋಧ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಇಂತಹ ವಿಚಾರಗಳು ದೊಡ್ಡ ದೊಡ್ಡ ಮಾಧ್ಯಮಗಳಲ್ಲಿ ಬಂದಂಥ ಸಂದರ್ಭದಲ್ಲಿ ನಾವು ಇದನ್ನು ಏನು ತನಿಖೆಯಾಗಬೇಕೋ, ಬೇಡವೋ, ಇದು ನಿಜವೋ, ಸುಳ್ಳೋ ಇದರ ಬಗ್ಗೆ ಕೇಳಬೇಕಾದುದು ನಮ್ಮ ಕರ್ತವ್ಯ. ನಾವು ನೇರವಾಗಿ ನೀವೇ ಇದನ್ನು ಯಾರಿಗೋ ಕೊಟ್ಟಿದ್ದೀರಿ, ದೊಡ್ಡ ಸ್ಕ್ಯಾಂಡಲ್ ಆಗಿದೆ ಎಂದು ನಾವು ಹೇಳುತ್ತಿಲ್ಲ, ಮಾಧ್ಯಮದಲ್ಲಿ ಬಂದಿದ್ದರಿಂದ ನಾವು ಸರ್ಕಾರವನ್ನು

ಎಚ್ಚರಿಸುವುದು, ಸರ್ಕಾರದಿಂದ ಸರಿಯಾದ ಮಾಹಿತಿಯನ್ನು ಕೇಳಬೇಕಾಗುತ್ತದೆ. ಒಬ್ಬ ಆಫೀಸರ್ ಕಚೇರಿಯಲ್ಲಿ ಆ ದೃಶ್ಯವನ್ನು ತೋರಿಸುತ್ತಾರೆ. ಆ ದೃಶ್ಯ ನಿಜವೇ ಅಲ್ಲವೇ ಎಂದು ಕೇಳಬೇಕಾದುದು ನಮ್ಮ prime duty. ಆದ್ದರಿಂದ ಮಾನ್ಯ ಧರಂಸಿಂಗ್‌ರವರು ಏನು ವಿಚಾರವನ್ನು ಹೇಳಿದರು ಆ ರೆಕಾರ್ಡ್ ಅನ್ನು ಸೆಟ್‌ರೈಟ್ ಮಾಡಬೇಕು.

(ಅಡಚಣೆ)

ಮಾನ್ಯ ಸದಸ್ಯರೊಬ್ಬರು: ನಮ್ಮ ಭಾಗದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ನಮಗೆ ಅವಕಾಶವನ್ನು ಕೊಡಿ.

(ಅಡಚಣೆ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹಿರಿಯರಿದ್ದಾರೆ. ಅವರ ಬಗ್ಗೆ ನಾನು ಅಪಾರವಾದಂಥ ಗೌರವವನ್ನು ಇಟ್ಟುಕೊಂಡಿದ್ದೇನೆ. ಏಕೆಂದರೆ ಆ ಸಣ್ಣತನದ ರಾಜಕೀಯವನ್ನು ನಾವು ಮಾಡಲಿಕ್ಕೆ ಹೋಗುವುದಿಲ್ಲ. ಏನಾಗಿದೆಯೆಂದರೆ ಅವರ ಮುಖ್ಯಮಂತ್ರಿ ಸ್ಥಾನದಿಂದ ಯಾರು ತೆಗೆದರು ಎಂಬುದು ಇಡೀ ದೇಶಕ್ಕೆ ಗೊತ್ತಾಗಿದೆ. ನಾವು ಹೇಳುವುದು ಬೇಡ, ಇಡೀ ರಾಜ್ಯದ ಜನ ನೋಡಿದ್ದಾರೆ. ಆದರೆ ಇಂತಹ ಒಂದು ಕೀಳು ಮಟ್ಟಕ್ಕೆ ಹೋಗುವಂತಹ ರಾಜಕಾರಣಿಗಳು ನಾವಲ್ಲ, ತಪ್ಪು ತಿಳಿದುಕೊಳ್ಳಬೇಡಿ. ಏಕೆಂದರೆ ಈಗ ನೋಡಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ನಮ್ಮ ವಿರೋಧಪಕ್ಷದ ನಾಯಕರು ಹೇಳಿದ್ದನ್ನು ಕರೆಕ್ಷನ್ ಮಾಡಿದ್ದಾರೆ. ಯಾವ ರೀತಿ ಕರೆಕ್ಷನ್ ಆಗುತ್ತದೆಂದು ತಾವು ಅರ್ಥ ಮಾಡಿಕೊಳ್ಳಿ. ಅವರ ಬಗ್ಗೆ ಅಪಾರವಾದ ಗೌರವ ಇದೆ, ಕಾಂಗ್ರೆಸ್‌ನವರೇ ಆ ಕೆಲಸ ಮಾಡುತ್ತಿದ್ದಾರೆ.

(ಅಡಚಣೆ)

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ರೇವಣ್ಣನವರು, ಗೌರವಾನ್ವಿತ ಸಚಿವರು, ಈ ಫೋಟೋ ಕಾಂಗ್ರೆಸ್‌ನವರೇ ಮಾಡಿದ್ದಾರೆಂದು ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಫೋಟೋ ಎಂದು ನಾನು ಹೇಳಿಲ್ಲ. ಮಾನ್ಯ ದೇಶಪಾಂಡೆಯವರಷ್ಟು ನಾನು ಬುದ್ಧಿವಂತನಲ್ಲ, ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ತೆಗೆಯಲಿಕ್ಕೆ ಕಾಂಗ್ರೆಸ್ ಪಕ್ಷದವರೇ ಕಾರಣರೇ ಹೊರತು ನಾನಲ್ಲವೆಂದು ಹೇಳಿದೆ.

ಶ್ರೀ ಆರ್.ವಿ. ದೇಶಪಾಂಡೆ: ಮೊನ್ನೆ ನಿಮ್ಮ ಯಜಮಾನರು ಹೇಳಿದರು, ನಾನೇ ಕಾಂಗ್ರೆಸ್‌ನಿಂದ ದೂರವಾದೆ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಅದನ್ನು ಮಾನ್ಯ ದೇಶಪಾಂಡೆಯವರು ಆತ್ಮ ಮುಟ್ಟಿಕೊಂಡು ಹೇಳಲಿ. ಮಾನ್ಯ ಧರಂಸಿಂಗ್‌ರವರನ್ನು, ಯಾರು ತೆಗೆದರು ಎಂದು ದೇಶಪಾಂಡೆಯವರು ಆತ್ಮ ಮುಟ್ಟಿಕೊಂಡು ಹೇಳಲಿ. ದೇವೇಗೌಡರು ಕೊನೆಯವರೆಗೆ ಪ್ರಯತ್ನಪಟ್ಟಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ: ನನ್ನ ಆತ್ಮ ಮುಟ್ಟಿಕೊಳ್ಳುವುದು ಬೇಡ, ನಿಮ್ಮ ಆತ್ಮವನ್ನು ಮುಟ್ಟಿಕೊಂಡು ಹೇಳಿ.

(ಅಡಚಣೆ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ ಈಗ ಮಾನ್ಯ ರೇವಣ್ಣನವರು ಒಂದು ಮಾತನ್ನು ಹೇಳಿದರು, ಮಾನ್ಯ ದೇಶಪಾಂಡೆಯವರು ಅದಕ್ಕೆ ಒಂದು ಮಾತನ್ನು ಹೇಳಿದರು, ದೇವೇಗೌಡರೇ ದೂರ ಹೋಗಿದ್ದಾರೆಂದು ಹೇಳಿದರು, ದೇವೇಗೌಡರು ಹತ್ತಿರವಾಗಿರುವವರೆಗೆ ಕಾಂಗ್ರೆಸ್‌ನವರು ಸೇಫ್ ಆಗಿ ಇದ್ದರು. ದೇವೇಗೌಡರನ್ನು ದೂರ ಕಳಿಸಿದ್ದರಿಂದಲೇ ಈ ಹೊಸ ವ್ಯವಸ್ಥೆಗಳು ಬಂದವು.

ಶ್ರೀ ಆರ್.ವಿ. ದೇಶಪಾಂಡೆ: ನಾನು ಏನು ಹೇಳಿದೆಯೆಂದರೆ, ಈ ಕಾಂಗ್ರೆಸ್‌ನವರಿಂದ ಕಾಂಗ್ರೆಸ್ ಜೆಡಿಎಸ್ ಸರ್ಕಾರ ಹೋಗಿದ್ದು ಎಂದು ತಾವು ಆಪಾದನೆ ಮಾಡುತ್ತಿದ್ದೀರಿ. ಮೊನ್ನೆ ಗೌರವಾನ್ವಿತ ಮಾಜಿ ರಾಷ್ಟ್ರದ ಪ್ರಧಾನಮಂತ್ರಿಗಳು, ತಮ್ಮ ಪಕ್ಷ ನಾಯಕರು ಹೇಳಿದ್ದಾರೆ, ನಾವೇ ಕಾಂಗ್ರೆಸ್‌ನಿಂದ ದೂರವಾಗಿದ್ದೇವೆಂದು ಹೇಳಿದ್ದಾರೆ. ಅವರು ಆ ವಿಚಾರ ಹೇಳಿದ ನಂತರ ಪುನಃ ಹಳೆಯ ವಿಚಾರ ಪ್ರಸ್ತಾಪ ಮಾಡುವ ಅವಶ್ಯಕತೆಯಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಹಿರಿಯರ ಬಗ್ಗೆ ಗೌರವವಿದ್ದರೆ ನೀವು ಏಕೆ ಮಾತನಾಡುತ್ತೀರಿ? ಮಾನ್ಯ ಧರಂಸಿಂಗ್‌ರವರ ಬಗ್ಗೆ ಯಾರೂ ಚಕಾರ ಎತ್ತಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ಯಾವ ಕಾರಣಕ್ಕಾಗಿ ದೂರವಾಗಿದ್ದಾರೆಂಬ ಬಗ್ಗೆ ಕೂಡ ಅವರು ಸ್ಪಷ್ಟಪಡಿಸಿದ್ದಾರೆ. ಕಾಂಗ್ರೆಸ್ ಅರೋಗೆಂಟ್, ಅಡಮೆಂಟ್ ಎಂದು ಸ್ಪಷ್ಟಪಡಿಸಿದ್ದಾರೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ನಮ್ಮ ನಾಯಕರ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದಾರೆ, ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ಮಾನ್ಯ ಪ್ರಕಾಶ್‌ರವರು ಈ ಸ್ಥಾನದಲ್ಲಿ ಕೆಲಸ ಮಾಡಿದ್ದಾರೆ. ಇಂತಹ ವಿಚಾರಗಳು ಬಂದಾಗ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಬೇಕಾಗುತ್ತದೆ, ನಿಮ್ಮ ಕರ್ತವ್ಯವನ್ನು ಮಾಡಬೇಕಾಗುತ್ತದೆ. ಒಂದು ಸಿ.ಡಿ. ರಿಲೇಯಾದಾಗ ಏನೂ ಮಾಡಬಾರದು, ನಮ್ಮ ಮೇಲೆ ಸುಳ್ಳು ಆಪಾದನೆ ಮಾಡುತ್ತಿದ್ದೀರಿ, ನಿಮ್ಮನ್ನು ಕ್ರಷ್ ಮಾಡುತ್ತಿದ್ದೇನೆಂದು ಹೇಳಿದರೆ, ತಪ್ಪಾಗುತ್ತದೆ. CNN ಮೇಲೆ ನಮ್ಮ ಕಂಟ್ರೋಲ್ ಏನು ಇದೆ? ಏನು ಅವರು ನಮ್ಮ ಏಜೆಂಟರೇ? ನಾವು ಆ ಸಿ.ಡಿ. ರಿಲೀಸ್ ಮಾಡಿದ್ದೇವೆಂದರೆ ಅದರ ಬಗ್ಗೆ ಎನ್‌ಕ್ವಯರಿ ಮಾಡಿ. ಆ ಸಿ.ಡಿ. ಸೋರ್ಸ್ ಯಾವುದು, ಎಲ್ಲಿಂದ ಬಂತು, ವಿಚಾರಣೆ ಮಾಡಬಹುದು, ಏನೂ ತಪ್ಪಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೇ, ಸಾಕು, ಅಧಿವೇಶನ ಕರೆದ ಉದ್ದೇಶ ಬರಗಾಲದ ಬಗ್ಗೆ ಚರ್ಚೆ ಮಾಡಲಿಕ್ಕೆ,

ಅದರ ಬಗ್ಗೆ ಶುರು ಮಾಡಿ. ಅಧಿವೇಶನ ಶುರುವಾದಾಗಿನಿಂದ ನಿಮ್ಮದು ಇದೇ ಕತೆ, ದಯವಿಟ್ಟು ಬರಗಾಲದ ಬಗ್ಗೆ ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚರ್ಚೆ ನಡೆಯಲಿ, ಇದನ್ನೇ ಎಷ್ಟು ದಿನ ಚರ್ಚೆ ಮಾಡಿಕೊಂಡು ಇರುತ್ತೀರಿ?

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೇ, ಬಹಳ ವಿವರಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿ ಯಾರು transport commissioner ಇದ್ದಾರೆ, ಅವರು ಏನು ಹೇಳಿದ್ದಾರೆ? ಈ ಲ್ಯಾಂಡ್‌ಗಳು ಈಗಾಗಲೇ ಗೋಕುಲ್ ಅರೋರಾ ಎಂಬುವವರಿಗೆ ಕಮಿಟ್ಟಾಗಿವೆ, ಅದರಲ್ಲಿ 50 ಎಕರೆ CM ಇಟ್ಟುಕೊಳ್ಳಬೇಕು. 25 ಎಕರೆ ಜಮೀನು ಆರೋಗ್ಯ ಸಚಿವ ಅಶೋಕ್ ಇಟ್ಟುಕೊಳ್ಳಬೇಕು ಎಂದು ಹೇಳಿದ್ದಾರೆ ಮತ್ತು ಈ ವ್ಯವಹಾರ ಆಗಬೇಕಾದರೆ ನಾನು ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಮಾತನಾಡಬೇಕು ಅಂತ ಹೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಜವಾಬ್ದಾರಿಯೇನು? ಸಿಡಿಗಳ ಸತ್ಯ ಅಸತ್ಯದ ಬಗ್ಗೆ ವಿಚಾರಣೆಯಾಗಲಿ. ಆಗ ತಕ್ಷಣ ಸಾರಿಗೆ ಆಯುಕ್ತ ನಾರಾಯಣಗೌಡರ ಮೇಲೆ ಅವರು ಹೇಳಿರುವುದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಹಾಗಾಗಿ ಅಧ್ಯಕ್ಷರೇ, ಇದರ ಬಗ್ಗೆ ತಾವು ಚರ್ಚೆಗೆ ಅವಕಾಶ ಮಾಡಿಕೊಡಿ. ನಾವು ಬೆಳಕು ಚೆಲ್ಲುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೇ, ನಿಯಮ 60ರ ಪ್ರಕಾರ ನಿಮ್ಮ ಮನ ಒಲಿಸುವಂತಹ ಕೆಲಸ ಮಾಡಬೇಕೇ ವಿನಾಃ ಅದರ ವಿವರಗಳ ಬಗ್ಗೆ ಹೋಗಬೇಕಾದ್ದಿಲ್ಲ. ಈ ಹಂತದಲ್ಲಿ ಅಧ್ಯಕ್ಷರಿಗೆ ತಾವು ಕೊಟ್ಟಿರುವ ಸೂಚನೆ ಬಗ್ಗೆ ಮನವರಿಕೆ ಮಾಡಿ ಕೊಡಬೇಕು ಅಷ್ಟೇ. ಮಾನ್ಯ ಮುಖ್ಯಮಂತ್ರಿಗಳಿಗೆ 50 ಎಕರೆ ಕೊಡಬೇಕು ಅಂದರು, ಇವರಿಗೆ 20 ಎಕರೆ ಕೊಡಬೇಕು ಅದರ ವಿವರಗಳನ್ನು ಇಲ್ಲಿ ಚರ್ಚೆ ಮಾಡುವ ಘಟವಿದಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ನಾರಾಯಣಗೌಡರು ಹೇಳಿದ್ದಾರೆ, ಹಾಗಾಗಿ ಅದರ ಬಗ್ಗೆ ಚರ್ಚೆಯಾಗಬೇಕು. ಮುಖ್ಯಮಂತ್ರಿಗಳ ಮೇಲೆ ನಾನು ಆಪಾದನೆ ಮಾಡಿಲ್ಲ. ನಿಮ್ಮ ಮೇಲೆ ಆಪಾದನೆ ಮಾಡಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಇದರ ಬಗ್ಗೆನೂ ಮಾತನಾಡಲಿಕ್ಕೆ ನಮ್ಮ ಹತ್ತಿರವೂ ಬೇಕಾದಷ್ಟು ಆಧಾರಗಳಿವೆ. ಬೇಕಾದರೆ ನಿಯಮ 60ರ ಪ್ರಕಾರ ತಾವು ಅವರ ಮನವೊಲಿಸುವ ಕೆಲಸ ಮಾಡಿ, ಅವರು ನಿರ್ಧಾರ ಮಾಡಲಿ, ಚರ್ಚೆಗೆ ಬಂದಾಗ ನಾವು ಉತ್ತರ ಕೊಡಲು ತಯಾರಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಪ್ರಕಾಶ್‌ರವರೇ, ನಾನು ಮಾನ್ಯ ಮುಖ್ಯಮಂತ್ರಿಗಳ ಮೇಲೆಲ್ಲಿ ಆಪಾದನೆ ಮಾಡಿದ್ದೇನೆ? ನಾನು ಮಾಡಿಲ್ಲ. ಹೀಗೆ ಒಬ್ಬ ಪೊಲೀಸ್ ಅಧಿಕಾರಿ ಹೇಳಿರುವುದನ್ನು ನಾವು ಕೇಳಿದ್ದೇವೆ. ಅದರ ಬಗ್ಗೆ ತನಿಖೆಯಾಗಬೇಕಲ್ಲಾ. ಒಂದು ವೇಳೆ ಆ ಅಧಿಕಾರಿ ಮಾತನಾಡಿರುವುದು

ನಿಜವಾಗಿದ್ದಲ್ಲಿ ಆ ಅಧಿಕಾರಿ ಮೆಲೆ ನೀವು ಕ್ರಮ ತೆಗೆದುಕೊಳ್ಳಬೇಕಲ್ಲಾ. ಅವರು ಖರೆ ಹೇಳಿದ್ದರೆ ತಾವು ಅದಕ್ಕೆ ಗೌರವ ಕೊಟ್ಟು ರಾಜೀನಾಮೆ ಕೊಡಬೇಕಾಗುತ್ತದೆ. ಹಾಗಾಗಿ ಇದರ ಬಗ್ಗೆ ಚರ್ಚೆ ಮಾಡುವುದು ಬಹಳ ಅವಶ್ಯಕತೆಯಿದೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರುವ ಸೂಚನೆಗೆ ಮನ್ನಣೆ ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

(ಅಡಚಣೆ)

ಒಬ್ಬ ಮಾನ್ಯ ಸದಸ್ಯರು: ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಲು ಕಾಂಗ್ರೆಸ್‌ನವರು ಅಡ್ಡಿ ಮಾಡುತ್ತಿದ್ದಾರೆ. ಅವರಿಗೆ ಉತ್ತರ ಕರ್ನಾಟಕದ ಬಗ್ಗೆ ಕಾಳಜಿಯಿಲ್ಲ.

(ಅಡಚಣೆ)

ಅಧ್ಯಕ್ಷರು: ಎಲ್ಲರೂ ಹೀಗೆ ಮಾತನಾಡಿದರೆ ಹೇಗೆ? ಯಾರೂ ಕೂಡ ನನ್ನ ಪರ್ಮಿಶನ್ ತೆಗೆದು ಮಾತನಾಡುತ್ತಿಲ್ಲ. ಯಾರೂ ಶಿಸ್ತು ಪಾಲಿಸುತ್ತಿಲ್ಲ. ಬೆಳಗಾಂ ಅಧಿವೇಶನದಲ್ಲಿ ಏನಾಯಿತು ಅಂದರೆ ಗೋಡ ಹೈ, ಮೈದಾನ ಹೈ ಆದದ್ದೇ ಹೊರತು ಇನ್ನೇನೂ ಇಲ್ಲ. ನಿಮ್ಮ ಎದೆ ಮುಟ್ಟಿಕೊಂಡು ಹೇಳಿ. ನೀವು ನಿಯಮಾವಳಿ ಪ್ರಕಾರವೋ ಅಥವಾ ಗೌರವದಿಂದಲೋ ನಡೆದುಕೊಂಡಿದ್ದೀರಾ, ಮಾತನಾಡಿದ್ದೀರಾ, ನೀವೇ ಹೇಳಿ, ಹೊರಗಡೆಯವರು ಯಾಕೆ ಹೇಳಬೇಕು. ಎಲ್ಲಾ ಎದ್ದು ನಿಂತು ಮಾತನಾಡುವುದೇ ಆಯಿತು, ಮಾನ್ಯ ಪ್ರಕಾಶ್‌ರವರೇ, ಇವರ ನಿಯಮ 60ರ ಕೆಳಗಿನ ಸೂಚನೆ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೇ?

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಈಗ CNN/IBN Channelನಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಹೇಳಿಕೆ ಕೊಟ್ಟ ಎಂಬ ವಿಚಾರದಲ್ಲಿ ಅವರು ನಿಲುವಳಿ ಸೂಚನೆ ತಂದಿದ್ದಾರೆ. ನಿಯಮ 60ರ ಕೆಳಗೆ ಅಂತಹ ಮಹತ್ವದ ವಿಚಾರದ ಬಗ್ಗೆ ಇಲ್ಲಿವರೆಗೂ ನಾವು ಚರ್ಚೆ ಮಾಡಿದ್ದೇವೆ. ಇದು ಪ್ರಾರಂಭವಾಗುವ ಮುಂಚೇನೇ ಈ ವಿಷಯ ಸುಮಾರು ಮೂರ್ನಾಲ್ಕು ತಿಂಗಳಿಂದ ಪ್ರಸ್ತಾಪಿತವಾಗಿತ್ತು. ಅಲ್ಲಿ ಮಾತನಾಡುತ್ತಾರೆ ಇಲ್ಲಿ ಮಾತನಾಡುತ್ತಾರೆ, ಇವರು ಹೇಳುತ್ತಾರೆ ಅಂತೆಲ್ಲಾ ನೆನ್ನೆ ಬೆಳಗಾವಿಯ ಪ್ರತಿಯೊಬ್ಬರಿಗೂ ಕೂಡ 9.30ಕ್ಕೆ CNN Channelನಿಂದ ಬರುತ್ತಾ ಇದೆ. ನೀವೆಲ್ಲಾ ನೋಡಬಹುದು ಅಂತ ನಮಗೆಲ್ಲಾ ಮಧ್ಯಾಹ್ನದಿಂದಲೇ ಹೇಳುತ್ತಿದ್ದರು. ಇದು ಒಂದು viewers rating ಅನ್ನು ಹೆಚ್ಚು ಮಾಡಿಕೊಳ್ಳುವ ಪ್ರಯತ್ನ ಅನೇಕ channelನಿಂದ ಆಗುತ್ತಿರುತ್ತವೆ. ಯಾವುದೋ ಒಂದು ದೂರದರ್ಶನ channelನವರು ಇದನ್ನು ಮಾಡಿದರು ಎಂಬ ಪ್ರಶ್ನೆಯಲ್ಲ. ಇದು ಒಂದು ವ್ಯವಹಾರದ ರೂಪ ಪಡೆಯುತ್ತಿರುವ ಕಾರಣಕ್ಕೇನೇ ಇಂಥವನ್ನು sting operations ಅಂತಲೂ ಕರೆಯುತ್ತೇವೆ. ತೆಹೆಲ್ಕಾ ವಿಚಾರದಲ್ಲೂ string operations ವರದಿ ಬಂದಾಗ ಅನೇಕ ಪತ್ರಿಕೆಗಳವರು ಅಗ್ರಲೇಖನಗಳನ್ನೂ ಬರೆದರು. ಇಲ್ಲಿ

ಅಂತಹ ವಿಚಾರ ನೋಡಲು ಸಾಧ್ಯವಿಲ್ಲ ಅಂತ ಲಂಡನ್‌ವರೆಗೆ ಕಳಿಸಿ ಕೊಟ್ಟಿರುವುದು ಇದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಅವರ ಇದು 60ರ ಕೆಳಗೆ ಬಹಳ ಮಹತ್ವದ ವಿಚಾರವೇನಲ್ಲ. ದಾಖಲೆಗಳನ್ನು ಅವರು ನೋಡಬಹುದಾಗಿತ್ತು. ಸನ್ಮಾನ್ಯ ಮುಖ್ಯಮಂತ್ರಿಗಳೇ ಅದೇಶ ಮಾಡಿದ್ದಾರೆ. ಇದು waste managementಗೆ ಬೆಲೆ ಬಾಳುತ್ತಿರುವುದರಿಂದಾಗಿರುವುದರಿಂದ ಸಾರ್ವಜನಿಕ ಉಪಯೋಗಕ್ಕಾಗಿ ಈ ಭೂಮಿಯನ್ನು ನೀವು ಕೊಡಬೇಕು ಎನ್ನುವಂತಹ ಆದೇಶ ದಿನಾಂಕ 21.8.2006ರಲ್ಲೇ ಮಾಡಿರುವುದೂ ಇದೆ. ಇದರ ಜೊತೆಗೆ ಮಾನ್ಯ ಅಶೋಕರ ಹೆಸರಾಗಲಿ ಮಾನ್ಯ ಕುಮಾರಸ್ವಾಮಿಯವರ ಹೆಸರಾಗಲಿ ಯಾವತ್ತೂ ಕೂಡ ಬಂದಿಲ್ಲ. ಮೂರು ವರ್ಷಗಳ ಹಿಂದೆ 2003ರಲ್ಲಿ ಅಶೋಕ್‌ರವರು ಅಲ್ಲಿನ ಶಾಸಕರಾಗಿ land grant committee ಯ ಅಧ್ಯಕ್ಷರಾಗಿ ಆ ಸಂದರ್ಭದಲ್ಲಿ ಅವರು ಹೇಳುತ್ತಾರೆ, ಈ ಭೂಮಿಯನ್ನು ನೀವು ಅವರಿಗೆ ಕೊಡಬೇಕಾದುದು ಇಲ್ಲ ಅಂತ. ಅದರ ಜೊತೆಗೆ ಅನೇಕರು ಮೈಸೂರು ಮಹಾರಾಜರ ಕಾಲದಲ್ಲಿ ಭೋವಿ ಜನಾಂಗಕ್ಕೆ ಕೊಟ್ಟಿರುವ ಭೂಮಿಯಿದು. ಆದ್ದರಿಂದ ನಮಗೆ ಬಿಟ್ಟು ಕೊಡಬೇಕು ಅಂತ ಅನೇಕರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. 2000ದಲ್ಲಿದ್ದ ಹಿಂದಿನ ಮುಖ್ಯಮಂತ್ರಿಗಳು ಕೂಡ ಇದಕ್ಕೆ ಶಿಫಾರಸ್ಸು ಮಾಡಿ ಕಳಿಸುತ್ತಾರೆ. ಆದರೆ ಎಲ್ಲಾ ಅವಧಿಯ ಮಂತ್ರಿಗಳೂ ಕೂಡ ಭೋವಿ ಜನಾಂಗದವರು ಪರಿಶಿಷ್ಟ ಜಾತಿಗೆ ಸೇರಿದವರು, ಮೈಸೂರು ಮಹಾರಾಜರ ಕಾಲದ್ದು ಇದು, ಆ ಕಾರಣಕ್ಕಾಗಿ ಅವರಿಗೇ ಆ ಭೂಮಿಯನ್ನು ಬಿಟ್ಟುಕೊಡಬೇಕೆಂಬ ಶಿಫಾರಸ್ಸುಗಳ ಕಡತ ಕೂಡ ಅವರ ಹತ್ತಿರ ಇದೆ ಇವತ್ತು. ಇವತ್ತಿಗೂ ಶಿಫಾರಸ್ಸು ಮಾಡುವುದನ್ನು ಬಿಟ್ಟಿಲ್ಲ. ಹೀಗಿರುವಾಗ ಯಾರ್ಯಾರು ಪತ್ರ ಬರೆದಿದ್ದಾರೆ ಅಂತ ಈ ಸಂದರ್ಭದಲ್ಲಿ ಹೇಳುವುದಿಲ್ಲ. ಹೇಳಬಾರದೂ ಕೂಡ. ಹೀಗಿರುವಾಗ 500 ಎಕರೆ ಭೂಮಿಯನ್ನು real estate agentಗೆ ವ್ಯಾಪಾರ ಸನ್ನಾಹ ಮಾಡುವ ವಿಚಾರವನ್ನು televisionನಲ್ಲಿ ಪ್ರಸ್ತಾಪಿಸಿರುತ್ತಾರೆ. ಈ ಜಮೀನನ್ನು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಮತ್ತೊಬ್ಬ NRIಗೋಕುಲ ಅರೋರ ಎಂಬುವವರಿಗೆ ಮಾತು ಕೊಟ್ಟಿರುವುದಾಗಿಯೂ ಮತ್ತು ಮುಖ್ಯಮಂತ್ರಿ ಕುಮಾರಸ್ವಾಮಿ 50 ಎಕರೆಯನ್ನು ಸ್ವಂತಕ್ಕಾಗಿ, ಆರೋಗ್ಯ ಸಚಿವ ಅಶೋಕ್ 25 ಎಕರೆಯನ್ನು ತಾವೇ ಉಳಿಸಿಕೊಳ್ಳುವುದಾಗಿ ಹೇಳಿದ್ದಾರೆಂದು ಪ್ರಸಾರ ಮಾಡಿದ್ದಾರೆ. ಈ ರೀತಿಯ ಪದವನ್ನು ಬಳಸಲು sting operation ಪ್ರಕಾರ ಇಲ್ಲ. ಅಶೋಕರ, ಕುಮಾರಸ್ವಾಮಿಯವರ ಹೆಸರುಗಳು ಪ್ರಸ್ತಾಪವಾಗಿಲ್ಲ. ಆಮೇಲೆ ಇಂಥವಕ್ಕೆಲ್ಲಾ, ನನ್ನಂಥವರೊಬ್ಬರು ಹೇಳುತ್ತಾರೆ ಇಂಥವರು ಯಾರೋ ಹೇಳಿದರು ಅಂತ hearsay evidence ನಾವಿಟ್ಟುಕೊಳ್ಳಲು ಆಗುತ್ತಾ? ಯಾವುದೇ ನ್ಯಾಯಾಲಯದಲ್ಲಿ ಯಾರೋ ಹೇಳಿದ್ದನ್ನು ನಾನು ಹೇಳುತ್ತಿದ್ದೇನೆ ಅಂದರೆ ಅದು ಸಾಕ್ಷಿಯಾಗುವುದಿಲ್ಲ. It is not a admissible evidence ಅಂತ ಅನೇಕ

ತೀರ್ಪುಗಳಿರುವುದೂ ಇದೆ. ಯಾರೊ ಒಬ್ಬರು ಇದನ್ನು ಹೇಳಿದರು ಅನ್ನುವ ಕಾರಣಕ್ಕಾಗಿ ನಾವೂ ಅವರ ಮೇಲೆ ಆಪಾದನೆ ಮಾಡುವುದಾಗಲಿ ಅದನ್ನೇ ಚರ್ಚೆ ಮಾಡುವುದಾಗಲೀ ಸಾಧುವಾಗಿರುವಂಥದಲ್ಲ. ಇದರಿಂದ ಪರಸ್ಪರ ನಮ್ಮಿಂದ ಕೆಸರು ಚೆಲ್ಲಾಡುವಂತಹ ಕೆಲಸ ಆಗಿ ನಮ್ಮ ವ್ಯಕ್ತಿತ್ವಕ್ಕೆ ನಾವೇ ಮಸಿ ಬಳಿದುಕೊಳ್ಳುವ ಪ್ರಯತ್ನ ಮಾಡುತ್ತೇವೆಯೇ ವಿನಾ ಇದರಿಂದ ಯಾವ ಪುರುಷಾರ್ಥವನ್ನೂ ಸಾಧಿಸಲಾಗುವುದಿಲ್ಲ. 60ರ ನಿಯಮಾವಳಿಗಳಲ್ಲಿ ತಂದಿರುವ ಇದು ಯಾವುದೇ ಸಾರ್ವಜನಿಕ ಮಹತ್ವದ್ದಲ್ಲ. ಕಡೆಗಣಿಸುವಂತಹ ತಿರಸ್ಕರಿಸುವಂತಹ ವಿಚಾರವಾಗಿರುವುದರಿಂದ, ನಿಲುವಳಿ ಸೂಚನೆಗೆ ಅರ್ಹವಾದದ್ದಲ್ಲ ಇದು. ಆದ್ದರಿಂದ ತಾವು ತತ್‌ಕ್ಷಣದಲ್ಲೇ ತಿರಸ್ಕರಿಸಬೇಕೆಂದು ಸರ್ಕಾರದ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಈ ಸಭೆ ಯಾವ ದಿಕ್ಕಿಗೆ ಹೋಗುತ್ತಿದೆಯೆಂಬುದು ಗೊತ್ತಾಗುತ್ತಿಲ್ಲ. ನಾವು ಸಭೆಯಿಂದ ಹೊರಗೆ ಹೋಗುತ್ತಿದ್ದೇವೆ. ನಿಮಗೆ ಒಳ್ಳೆಯದಾಗಲಿ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದಿಂದ ಹೊರ ನಡೆದರು)

ಶ್ರೀ ವೈಜನಾಥ ಪಾಟೀಲ್: ಸಿ.ಡಿ. ಆಗಲಿ, ಫೋಟೋ ಆಗಲಿ, ಅದರ ಬಗ್ಗೆ ಯಾರನ್ನು, ಹೇಗೆ ಬೇಕಾದರೂ ನಡೆಸಿಕೊಳ್ಳಬಹುದೇ? ಅದನ್ನು ತಾವು ಟೆಸ್ಟ್ ಮಾಡಿಸುತ್ತೀರಾ? ಸತ್ಯವನ್ನು ಹೊರಗೆ ತರುತ್ತೀರಾ? ಕೇಳುತ್ತಿದ್ದೇನೆ.

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ನನ್ನ ಹೆಸರು ಹೇಳಿದ್ದಾರೆ. ಅದೇಕೆ ಹೇಳಿದರು? ಯಾರ ಇಂಟೆನ್‌ಶನ್ ಇದೆಯೋ, ನನಗೆ ಗೊತ್ತಿಲ್ಲ, ಯಾವುದೇ ಸಿಎನ್‌ಎನ್ ಚಾನೆಲ್‌ನಲ್ಲಿ ನನ್ನ ಹೆಸರು ಬಂದಿಲ್ಲ. ಪಾಪ! ಯಾರೋ ನಮಗೆ ಬಹಳ ಆತ್ಮೀಯರು ನನ್ನ ಹೆಸರನ್ನು ಬೇಕೆಂತಲೇ ಸೇರಿಸಿದ್ದಾರೆ, ಅದೇಕೆ ಸೇರಿಸಿದರೋ? ನಾನಂತೂ ಅವರಿಗೆ ದ್ರೋಹ ಬಗೆದಿಲ್ಲ. ನನ್ನ ಹೆಸರನ್ನು ಏಕೋ ಪ್ರೀತಿಯಿಂದ ಸೇರಿಸಿದ್ದಾರೆ, ಸೇರಿಸಲಿ, ಪರವಾಗಿಲ್ಲ. ಆದರೆ, ಲ್ಯಾಂಡ್ ಬಗ್ಗೆ ಏನು ಇದೆಯೆನ್ನುವುದನ್ನು ನಾನು ಆ ಕ್ಷೇತ್ರದ ಎಂಎಲ್‌ಎ ಆಗಿ ಇವೊತ್ತು ಡಿಸ್ಟ್ರಿಕ್ಟ್ ಮಿನಿಸ್ಟರ್ ಆಗಿ ಹೇಳುವುದು ನನ್ನ ಕರ್ತವ್ಯವಾಗಿದೆ. ಅದಕ್ಕೋಸ್ಕರ, ಯಾರ ಹೆಸರನ್ನೂ ಪ್ರಸ್ತಾಪ ಮಾಡುವುದಿಲ್ಲ. ಅದಕ್ಕೆ ಯಾರು ರೆಕಮಂಡೇಶನ್ ಮಾಡಿದ್ದಾರೆಂದು ಹೇಳುವುದಕ್ಕೂ ಹೋಗುವುದಿಲ್ಲ. ಏಕೆಂದರೆ, ನಾನು ಇದುವರೆಗೂ ಅಸೆಂಬ್ಲಿಗೆ ಮೂರು ಬಾರಿ ಎಂಎಲ್‌ಎ ಆಗಿ ಗೆದ್ದು ಬಂದಿದ್ದೇನೆ. ಯಾವುದೇ ರೀತಿಯಾಗಿ ವೈಯಕ್ತಿಕವಾಗಿ ನಾನು ಯಾರ ಮೇಲೂ ಅಲಿಗೇಶನ್ ಮಾಡಿಲ್ಲ. ಕಾಂಗ್ರೆಸ್ ನಿಲುವಿನ ಬಗ್ಗೆ ಮಾತನಾಡಿರಬಹುದೇ ಹೊರತು ಅಥವಾ ಜೆಡಿ (ಎಸ್)ನ ನೀತಿ-ನಿಯಮ ಹಾಗೂ ನಿಲುವುಗಳ ಬಗ್ಗೆ

ಮಾತನಾಡಿರಬಹುದೇ ಹೊರತು ವೈಯಕ್ತಿಕವಾಗಿ ನಾನು ಯಾರ ಮೇಲೂ ನನಗೆ ತಿಳಿದಂತೆ ನಾನು ಆಪಾದನೆ ಮಾಡಿಲ್ಲ, ಮುಂದೆ ಮಾಡುವುದಕ್ಕೂ ಹೋಗುವುದಿಲ್ಲ. ಆದರೆ, ನನ್ನ ಹೆಸರು ಬಂದಿರುವುದರಿಂದ ನಾನು ಸಿಎನ್ಎನ್ ನೋಡಿದ್ದೇನೆ, ಉದಯ ಚಾನೆಲ್ ನೋಡಿದ್ದೇನೆ, ಎಲ್ಲಾ ಚಾನೆಲ್‌ಗಳನ್ನೂ ನೋಡಿದ್ದೇನೆ. ನನ್ನ ಹೆಸರು ಎಲ್ಲಿಯೂ ಪ್ರಸ್ತಾಪವಾಗಿಲ್ಲ. ಯಾವ ಇಂಟೆನ್‌ಶನ್‌ನಲ್ಲಿ ನನ್ನ ಹೆಸರನ್ನು ಸೇರಿಸಿದ್ದಾರೋ! ಆದರೂ ಪರವಾಗಿಲ್ಲ. ನನ್ನ ಮನಸ್ಸಿಗೆ ಮೊದಲನೇ ಬಾರಿ ನೋವಾಗಿದೆ. ಯಾವುದೇ ದಾಖಲೆಯಲ್ಲಿ ನನ್ನ ಹೆಸರು ಬರುತ್ತಿರತಕ್ಕಂಥಾದ್ದು ಅಲಿಗೇಶನ್ ಬರುತ್ತಿರತಕ್ಕಂಥಾದ್ದು ನನಗೆ ನೋವು ತಂದಿದೆ. ಆದರೂ ನಾನು ಆ ಭಾಗದ ಶಾಸಕನಾಗಿ ನನ್ನ ಕರ್ತವ್ಯವಿದೆ. ಸರ್ಕಾರದ ಪರವಾಗಿ ಏನು ಸ್ಟೇಟಸ್ ಇದೆಯಂದು ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿದುಕೊಂಡು ನಾನು ಹೇಳುತ್ತಿದ್ದೇನೆ.

ಬೆಂಗಳೂರು ಯೂನಿವರ್ಸಿಟಿಯಿಂದ ಐದು ಕಿಲೋಮೀಟರ್, ಅದು ಸರಿಯಲ್ಲ ಕನಕಪುರ ರೋಡ್ ಉತ್ತರಹಳ್ಳಿ ಹೋಬಳಿ, ಮನವರ್ತೆ ಕಾವಲು ಎಂದು ಹೆಸರು ಇದೆ. ಸರ್ವೆ ನಂಬರ್ 5, ಸುಮಾರು 348 ಎಕರೆ. ಇಷ್ಟು ಎಕರೆಗಳುಳ್ಳ ಭೋವಿ ಕಾಲೋನಿಯಲ್ಲಿ ಸುಮಾರು 50–60 ವರ್ಷಗಳಿಗೂ ಮೇಲ್ಪಟ್ಟು ಒಂದಿಬ್ಬರು ಭೋವಿಗಳಿದ್ದರು. ಇವ್ವೊತ್ತು ಸುಮಾರು 30 ಭೋವಿಗಳು ಅಲ್ಲಿರಬಹುದು. ಅವರು ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ಅನಂತರ ಇವ್ವೊತ್ತು ಸಿಎನ್ಎನ್‌ರವರು ಚಾನೆಲ್‌ನಲ್ಲಿ ಏನು ಅವರಿಗೆ ಹೇಳಿದರು, ಅವರಿಗೆ ಗೊತ್ತಿದೆಯೋ, ಏನೋ, ಗೊತ್ತಿಲ್ಲ. ಇದು ಫಾರೆಸ್ಟ್ ಲ್ಯಾಂಡ್ ಎಂದು ಹೇಳಿದ್ದಾರೆ. ಸಿಎನ್ಎನ್ ಚಾನೆಲ್‌ಗೆ ಅದರ ಬಗ್ಗೆ ಯಾರು ಕೊಟ್ಟರೋ ಮಹಾನುಭಾವರು! ಅದನ್ನು ಫಾರೆಸ್ಟ್ ಲ್ಯಾಂಡ್ ಎಂದು ಹೇಳಿದ್ದಾರೆ. ಆದರೆ, ನಾನು ಹೇಳುತ್ತಿದ್ದೇನೆಃ ಅಲ್ಲಿ ವಾಸ ಮಾಡುತ್ತಿರುವ ಭೋವಿ ಜನಾಂಗದವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಶನ್ ಹಾಕಿದ್ದಾರೆ. ನಾನು ರಿಟ್ ಪಿಟಿಶನ್ ನಂಬರ್ ಸಹ ಕೊಡುತ್ತೇನೆ. 2001 ಮತ್ತು 2002ರಲ್ಲಿ ರಿಟ್ ಪಿಟಿಶನ್ ಹಾಕಿದ್ದಾರೆ. ಆ ರಿಟ್ ಪಿಟಿಶನ್‌ಗೆ ಹೈಕೋರ್ಟ್ ಆದೇಶ ಮಾಡಿದೆ. ಇದು ಫಾರೆಸ್ಟ್ ಲ್ಯಾಂಡ್ ಎನ್ನುವುದಕ್ಕೆ ದಾಖಲೆ ಕೊಡಿ ಎಂದು ನಾವು ಪದೇ ಪದೇ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಅವರನ್ನು ಕೇಳಿದರೂ ಸಹ 'ಇದು ಫಾರೆಸ್ಟ್ ಲ್ಯಾಂಡ್' ಎನ್ನುವ ಹೇಳಿಕೆಗೆ ನಮಗೆ ಸರಿಯಾದ ದಾಖಲೆ ಕೊಡದೇ ಇರುವುದರಿಂದ ನಾವು ಇದು ಫಾರೆಸ್ಟ್ ಲ್ಯಾಂಡ್ ಅಲ್ಲ, ಇದನ್ನು 'ಡಿ' ಕೆಟಗರಿ ಲ್ಯಾಂಡ್, ಅಂದರೆ, ಮಂಜೂರು ಮಾಡುವ ಲ್ಯಾಂಡ್. ಇದನ್ನು ಅಲ್ಲಿ ಯಾವ ಭೋವಿ ಜನರಿದ್ದಾರೆ, ಅವರಿಗೆ ಗ್ರಾಂಟ್ ಮಾಡಿ ಎಂದು ಹೈಕೋರ್ಟ್ ಆದೇಶ ಮಾಡಿದೆ. ಅಲ್ಲಿಗೆ ಅದು ಹೊರಟು ಹೋಯಿತು. ಅದು ಫಾರೆಸ್ಟ್ ಲ್ಯಾಂಡ್ ಅಲ್ಲ. ಆದರೆ

ಇವೊತ್ತಿನವರೆಗೂ ಪಹಣಿಯಲ್ಲಿ ಅದು ಫಾರೆಸ್ಟ್ ಲ್ಯಾಂಡ್ ಎಂದೇ ಬರುತ್ತಿದೆ. ಅದಾದ ನಂತರ ನಾನು ನಿಮ್ಮ ವಿರುದ್ಧ ಮಾತನಾಡುತ್ತಿಲ್ಲ. ನಾನು ಕಾಂಗ್ರೆಸ್ ವಿರುದ್ಧವೂ ಮಾತನಾಡುತ್ತಿಲ್ಲ. ಏನು ಸ್ಟೇಟಸ್ ಇದೆಯೆಂದು ಹೇಳುತ್ತಿದ್ದೇನೆ. ದಯವಿಟ್ಟು ಎರಡು ನಿಮಿಷ ಅವಕಾಶ ಕೊಡಿ. ಅದನ್ನೆಲ್ಲವನ್ನೂ ಹೇಳಿಬಿಡುತ್ತೇನೆ. ಅನಂತರ, ಚರ್ಚೆಗೆ ಅವಕಾಶ ಮಾಡಿಕೊಡಲಿ.

ಅಧ್ಯಕ್ಷರು: ಮಾನ್ಯ ಅಶೋಕ್‌ರವರೆ, ದಯಮಾಡಿ ಕೇಳಿ, ಮಾನ್ಯ ಧರ್ಮಸಿಂಗ್‌ರವರು ಮತ್ತು ಅವರ ಸ್ನೇಹಿತರು ಸೂಚನೆಯನ್ನು ಕಳುಹಿಸಿಕೊಟ್ಟಿದ್ದಾರೆ. ನಿಯಮ 60ರ ಪ್ರಕಾರ ಕೊಡಬೇಕಾದರೆ, ಈ ಹೌಸ್ ಆರಂಭವಾಗುವುದಕ್ಕಿಂತಲೂ ಒಂದು ಗಂಟೆ ಮೊದಲು ಕೊಡಬೇಕಾಗಿತ್ತು. ಅದನ್ನು ಅವರು ಬೆಳಿಗ್ಗೆ 10.30 ಗಂಟೆಗೆ ಕೊಟ್ಟಿದ್ದಾರೆ. ಅಂದರೆ, ಅರ್ಧ ಗಂಟೆ ತಡವಾಗಿ ಕೊಟ್ಟಿದ್ದಾರೆ. ಇದು ನಿಯಮಾವಳಿಗೆ ವಿರುದ್ಧವಾಗಿದೆ. ಆದುದರಿಂದ, ನಾನು ಅವರ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ತಳ್ಳಿಹಾಕಿದ್ದೇನೆ. ತಾವು ಕುಳಿತುಕೊಳ್ಳಿ. ಏಕೆ explanation? ಚರ್ಚೆಯಾದ ನಂತರ ತಾನೇ explanation.

ಶ್ರೀ ಎನ್. ಧರ್ಮಸಿಂಗ್: ಒಂದು ಗಂಟೆ ಮೊದಲೇ ಕೊಟ್ಟಿದ್ದೇನೆ. ಮಾನ್ಯ ಪ್ರಕಾಶ್‌ರವರೂ ಇದರ ಬಗ್ಗೆ ಹೇಳಿದ್ದಾರೆ.

ಅಧ್ಯಕ್ಷರು: ತಳ್ಳಿಹಾಕಿದ್ದೇನೆ. ನೀವು ಯಾವಾಗಲೋ ಕೊಟ್ಟರೆ ಏನು ಮಾಡುವುದಕ್ಕಾಗುತ್ತದೆ?

ಶ್ರೀ ಎನ್. ಧರ್ಮಸಿಂಗ್: ಹತ್ತು ಗಂಟೆಗೆ ನಾವು ಕೊಟ್ಟಿದ್ದೇವೆ.

ಅಧ್ಯಕ್ಷರು: ನಮಗೆ 10 ಗಂಟೆ 30 ನಿಮಿಷಕ್ಕೆ ಬಂದಿದೆ.

ಶ್ರೀ ಎನ್. ಧರ್ಮಸಿಂಗ್: ಏಕೆ ನೀವು ಕೊನೆ ಕೊನೆಗೆ ಸಾಯಂಕಾಲ ಈ ತರಹ.....

ಅಧ್ಯಕ್ಷರು: ಇದು ಇರತಕ್ಕಂಥ ವಿಚಾರ. ಸಾಯಂಕಾಲ ಎಂದರೆ, ಏನೂ ಇಲ್ಲದೇ ಇರುವುದನ್ನು ಮಾಡುವುದಕ್ಕಾಗುತ್ತದೆಯೇ?

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು ಈ ಸಭೆ ಕರೆಯಬೇಕಾದರೆ ಬಿಎಸಿಯಲ್ಲಿ....

ಶ್ರೀ ವೈಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೆ, ದಯಮಾಡಿ ಮುಂಜಾನೆಯಿಂದಲೂ....

ಅಧ್ಯಕ್ಷರು: ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ? ಯಾರಾದರೂ ಒಬ್ಬರು ಮಾತನಾಡಿ.

ಶ್ರೀ ವೈಜನಾಥ ಪಾಟೀಲ್: ನಾನು ನೋಡುತ್ತಿದ್ದೇನೆ. ಬೆಳಿಗ್ಗೆಯಿಂದ ಹತ್ತತ್ತು ಸಲ ಅವರೇ ಎದ್ದು ನಿಂತುಕೊಳ್ಳುತ್ತಿದ್ದಾರೆ. ನಾವು ಒಂದೇ ಸಲ ಎದ್ದು

ನಿಂತಿದ್ದೇವೆ. ಒಂದೇ ಪ್ರಶ್ನೆ ಕೇಳುತ್ತೇನೆ. ಅದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು. ಸಿ.ಡಿ.ಯಲ್ಲಾಗಲಿ ಫೋಟೋದಲ್ಲಾಗಲಿ ಎಲ್ಲಿಯಾದರೂ ಅದರ ಬಗ್ಗೆ ಟೆಸ್ಟ್ ಮಾಡುವುದಕ್ಕೆ ತಯಾರಿದ್ದೀರಾ? ಹೇಗೆ? ಇದಕ್ಕೆ ಸರ್ಕಾರ ಉತ್ತರ ಕೊಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ವೈಜನಾಥ ಪಾಟೀಲರೆ, ಅದು ಬೇಡ. ಬೆಳಗಾಂನಲ್ಲಿ ವಿಧಾನಸಭೆ ಕರೆದು ಕಾಲಹರಣವಾಗಿದೆ. ಯಾವುದೇ ಪುರುಷಾರ್ಥ ಸಾಧನೆಯಾಗಲಿಲ್ಲವೆಂದು ತಮಗೆ ತಿಳಿಸಿ, ನಾವು ಸಭೆಯಿಂದ ಹೊರಗಡೆ ಹೋಗುತ್ತಿದ್ದೇವೆ.

(ಮಾನ್ಯ ಸದಸ್ಯರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಸದನದಿಂದ ಹೊರ ನಡೆದರು)

ಶ್ರೀ ವಾಟಾಳ್ ನಾಗರಾಜ್: ಯಾವ ಉದ್ದೇಶಕ್ಕೋಸ್ಕರವಾಗಿ ಈ ಸಭೆ ಕರೆಯಲಾಗಿತ್ತೋ, ಆ ಉದ್ದೇಶ ಈಡೇರುತ್ತಿಲ್ಲ. ಅದರ ಬಗ್ಗೆ ಬಹಳ ನೋವಾಗಿದೆ. ಇದು ಒಳ್ಳೆಯ ಸಂಪ್ರದಾಯವಲ್ಲ. ನಾನು ನೋವಿನಿಂದ ಹೊರಗಡೆ ಹೋಗುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದಿಂದ ಹೊರ ನಡೆದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಯಾವ ಉದ್ದೇಶಕ್ಕೋಸ್ಕರ ಸದನ ಕರೆಸಿದಿರೋ, ಆ ಉದ್ದೇಶ ಇಲ್ಲಿ ನೆರವೇರಲಿಲ್ಲ, ಸಫಲವಾಗಲಿಲ್ಲ, ಆದ್ದರಿಂದ, ಅನಾವಶ್ಯಕವಾಗಿ ಕಾಲಹರಣವಾಗಿದೆ. ಇದನ್ನು ಪ್ರತಿಭಟಿಸಿ ನಾವು ಹೊರಗಡೆ ಹೋಗುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ಸದನದಿಂದ ಹೊರ ನಡೆದರು)

ಶ್ರೀ ಎಸ್. ರಾಜೇಂದ್ರನ್: ಗಡಿನಾಡಿನ ಅಭಿವೃದ್ಧಿ ಬಗ್ಗೆ ಮಾತನಾಡಬೇಕು, ಬೆಳಗಾವಿ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಮಾತನಾಡಬೇಕು, ಆದರೆ, ಇಲ್ಲಿ ಏನೂ ಇಲ್ಲ....

(ಮಾನ್ಯ ಸದಸ್ಯರಾದ ಶ್ರೀ ಎಸ್. ರಾಜೇಂದ್ರನ್‌ರವರು ಸದನದಿಂದ ಹೊರ ನಡೆದರು)

ಶ್ರೀ ವೈಜನಾಥ ಪಾಟೀಲ್: ನಮ್ಮ ಪ್ರಶ್ನೆಗೆ ಗೃಹ ಮಂತ್ರಿಗಳು ಉತ್ತರ ಕೊಡುತ್ತಿಲ್ಲ.

ಅಧ್ಯಕ್ಷರು: ತಾವು ಕುಳಿತುಕೊಳ್ಳಿ. ಮತ್ತೆ ಮತ್ತೆ ಏಕೆ ಹೀಗೆ ಮಾಡುತ್ತೀರಿ?

ಶ್ರೀ ವೈಜನಾಥ ಪಾಟೀಲ್: ನನ್ನ ಒಂದು ಪ್ರಶ್ನೆಗೆ ಮಾನ್ಯ ಗೃಹಮಂತ್ರಿಗಳು ಕ್ಲಾರಿಫಿಕೇಶನ್ ಕೊಡಬೇಕೆಂದು ಅಷ್ಟೇ ನಾನು ಕೇಳುತ್ತಿದ್ದೇನೆ.

5.30 P.M.

ಅಧ್ಯಕ್ಷರು: ಅದೇನೋ ಕ್ಲಾರಿಫಿಕೇಶನ್ ಅಂತೆ, ನೀವು ಕೊಡಿ. ಇಲ್ಲದಿದ್ದರೆ, ವೈಜನಾಥ ಪಾಟೀಲರು ಸುಮ್ಮನೆ ಕೂರುವುದಿಲ್ಲ. ಅವರನ್ನು ಹೊರಗಡೆ ಕಳುಹಿಸುವುದಕ್ಕೂ ಆಗುವುದಿಲ್ಲ. ಒಳಗಡೆಯೂ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಹಾಗಾಗಿದೆ ಇವರ ಕತೆ. ದಯಮಾಡಿ ಕೇಳಿ.

ಶ್ರೀ ವೈಜನಾಥ ಪಾಟೀಲ್: ನಾನು ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ. ಸಿ.ಡಿ.ಯಾಗಲಿ ಅಥವಾ ಫೋಟೋ ಆಗಲಿ, ಅದರ ಬಗ್ಗೆ ಮುಂಜಾನೆಯಿಂದಲೂ ಸಾಕಷ್ಟು ಚರ್ಚೆಯಾಯಿತು. ಆದರೆ, ಕೊನೆಗೆ ರಿಸಲ್ಟ್ ಏನು? ಈಗ ಸಿ.ಡಿ. ನಕಲಿ ಇದೆಯೇ? ಅಥವಾ ಅಸಲಿ ಇದೆಯೇ? ನಮಗೆ ಗೊತ್ತಿಲ್ಲ. ಫೋಟೋ ಸಹ ಅಸಲಿಯೇ? ನಕಲಿಯೇ? ನಮಗೆ ಗೊತ್ತಿಲ್ಲ. ಇದಕ್ಕೆ ಸೈಂಟಿಫಿಕ್ ಆಗಿ ಕೆಮಿಕಲ್ ಟೆಸ್ಟ್‌ನಿಂದ ಸತ್ಯ ಹೊರಗಡೆ ಬರುವುದಕ್ಕೆ ಸಾಧ್ಯವಿದೆಯೇ? ಇಲ್ಲವೇ? ಕೇಳುತ್ತಿದ್ದೇನೆ. ಇದು ಸಾಧ್ಯತೆ ಇದ್ದರೆ, ಅದನ್ನು ಹೇಗೆ ಮಾಡಿಸುತ್ತಿರಿ ಎಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯ ಪ್ರಸ್ತಾಪ ಮಾಡಿರುವ ಹಿರಿಯರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ವಿಷಯವನ್ನು ಮುಕ್ತಾಯಗೊಳಿಸಬೇಕೆಂದು ಸಂಪೂರ್ಣ ಸಹಕಾರ ಕೊಟ್ಟಿದ್ದಾರೆ. ಆ ವಿಚಾರದ ಬಗ್ಗೆ ಮಾನ್ಯ ಸದಸ್ಯರಾದ ಎಂ.ಪಿ. ವೆಂಕಟೇಶ್‌ರವರು ಸದನಕ್ಕೆ ಹೇಳಿದ ನಂತರ ಅದು ಮುಕ್ತಾಯವಾಗಿದೆ. ಇದು ನಕಲಿಯೇ? ಅಥವಾ ನೈಜವಾದದ್ದೇ? ಎಂದು ಯೋಚನೆ ಮಾಡಬೇಕಾಗಿದ್ದರೆ, ಅದಕ್ಕೆ ಬೇರೆ ಮಾರ್ಗಗಳಿರುತ್ತವೆ. ಆ ಪರ್ಯಾಯ ಮಾರ್ಗಗಳನ್ನೂ ಕೂಡ ತಾವು ಯೋಚನೆ ಮಾಡಿ ಎಂದು ಹೇಳಿದ್ದೇವೆ. ಅದೇ ರೀತಿಯಾಗಿ ಮಾನ್ಯ ಸ್ಪೀಕರ್‌ರವರು ಅದರ ಬಗ್ಗೆ ಯೋಚನೆ ಮಾಡಿ, ನಿರ್ಧರಿಸಿ ತಮ್ಮ ಮೂಲಗಳಿಂದ ಇದರ ಬಗ್ಗೆ ತಿಳಿದುಕೊಳ್ಳಿ ಎನ್ನತಕ್ಕಂಥ ಮಾತುಗಳನ್ನೂ ಹೇಳಿದ್ದೇವೆ. ಈಗ ಈ ವಿಚಾರ ಮುಕ್ತಾಯವಾಗಿದೆ. ಈ ವಿಚಾರದಲ್ಲಿ ಮತ್ತೆ ಪ್ರಶ್ನೆ ಮಾಡಬೇಕಾದ್ದಿಲ್ಲ. 60ರ ನಿಯಮಾವಳಿ ಬಗ್ಗೆ ಕೂಡ ಮಾನ್ಯ ಸ್ಪೀಕರ್‌ರವರು ಹೇಳಿದ ನಂತರ ಅದೂ ಕೂಡ ಮುಕ್ತಾಯವಾಗಿದೆ. ಈಗ ಇರತಕ್ಕಂಥಾದ್ದು ನಮ್ಮ ಇವೊತ್ತಿನ ದೈನಂದಿನ ಕಾರ್ಯಕ್ರಮಗಳು, ಮಸೂದೆ ಮತ್ತು ಬರಗಾಲದ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು.

ಅಧ್ಯಕ್ಷರು: ಮಾನ್ಯ ಪ್ರಕಾಶ್‌ರವರೆ, ಮೂರನೆಯದಾಗಿ, ನಮ್ಮ ಕಾರ್ಯಕ್ರಮ ಪಟ್ಟಿಯಲ್ಲಿ ಶಾಸನ ರಚನೆ ಎಂದು ಇದೆ. ಆದರೆ, ನಾಲ್ಕನೆಯದಾಗಿ, ನಿಯಮ 69ರ ಬರಗಾಲದ ಚರ್ಚೆ ಇದೆ. ಈಗ ಬಹಳ ಸದಸ್ಯರು ಬರಗಾಲದ ಬಗ್ಗೆ ಮತ್ತು ಅದರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕೆಂದು ಇಲ್ಲಿ ಧರಣಿ ಮಾಡುವುದಕ್ಕೆ

ಬಂದಿದ್ದು, ಎಲ್ಲಾ ನಡೆದಿದೆ. ಆದುದರಿಂದ, ಯಾವುದನ್ನು ಮೊದಲು ತೆಗೆದುಕೊಳ್ಳೋಣವೆಂದು ತಾವು ಹೇಳಿ. ಯಾವುದಾದರೂ ಅಗತ್ಯವಾಗಿ ಆಗಲೇಬೇಕಾದ, ಪಾಸ್ ಆಗಲೇಬೇಕಾದ ಬಿಲ್ ಇದ್ದರೆ.... ಕೊನೆಯಲ್ಲಿ ನಾವು....

ಶ್ರೀ ಎಂ.ಪಿ. ಪ್ರಕಾಶ್: ತಾವು ಹೇಳಿದಂತೆ....

ಶ್ರೀ ಆರ್.ವಿ. ದೇಶಪಾಂಡೆ: ಬರಗಾಲದ ಬಗ್ಗೆ ಮೊದಲು ತೆಗೆದುಕೊಳ್ಳಿರೆಂದು ಅವರೇ ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ಹಾಗೆ ಹೇಳಲಿಲ್ಲ. ಮಸೂದೆಗಳಿವೆ, ಬರಗಾಲದ ಬಗ್ಗೆಯೂ ಇದೆಯೆಂದು ಹೇಳಿದೆ. ಬಹಳ ಮುಖ್ಯವಾಗಿರತಕ್ಕ ಒಂದು ಮೆಸೇಜನ್ನು governor ರವರು ಕಳುಹಿಸಿಕೊಟ್ಟಿದ್ದಾರೆ. ಹಿಂದೆ ನಾವು ಲಾಭದಾಯಕ ಹುದ್ದೆಗಳ ವಿಚಾರದಲ್ಲಿ ಎರಡೂ ಸದನ ಪಾಸ್ ಮಾಡಿ ಕಳುಹಿಸಿರುವ ವಿಷಯದಲ್ಲಿ ರಾಜ್ಯಪಾಲರು ಒಂದು ಸಂದೇಶವನ್ನು ಉಭಯ ಸದನಕ್ಕೆ ಕಳುಹಿಸಿಕೊಟ್ಟಿದ್ದಾರೆ. ಈ ರೀತಿ ಕಳುಹಿಸಿಕೊಟ್ಟಿರುವ ಹಿನ್ನೆಲೆಯಲ್ಲಿ ಮತ್ತೆ ಪರ್ಯಾಲೋಚಿಸಬೇಕೆಂದು ನಾವು ಈವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿದೆ. ಆ ಕಾರಣಕ್ಕಾಗಿ ಮೊದಲು ಅದನ್ನು ಆಧ್ಯತೆಯ ಮೇಲೆ ತೆಗೆದುಕೊಂಡು ಅದಕ್ಕೆ ಎಲ್ಲಾ ನಮ್ಮ ಸದಸ್ಯ ಮಿತ್ರರನ್ನು ಕೇಳಿಕೊಳ್ಳುತ್ತಿದ್ದೇನೆ. ಬಹಳ ಮುಖ್ಯವಾಗಿರತಕ್ಕ ವಿಚಾರ ಅದು. ಲಾಭದಾಯಕ ಹುದ್ದೆ ಯಾವುದು ಎಂದು ಪರಿಗಣಿಸಬೇಕಾಗಿರತಕ್ಕ ಹಿನ್ನೆಲೆಯಲ್ಲಿ ನಾವು....

ಶ್ರೀ ವೈಜನಾಥ್ ಪಾಟೀಲ್: ನನ್ನ ಪ್ರಶ್ನೆಗೆ ಸಮರ್ಪಕವಾದ ಉತ್ತರ ಸರ್ಕಾರದಿಂದ ಸಿಕ್ಕದ ಕಾರಣ ನಾನು ಸಭೆಯಿಂದ ಹೊರಕ್ಕೆ ಹೋಗುತ್ತಿದ್ದೇನೆ.

(ಮಾನ್ಯ ವೈಜನಾಥ್ ಪಾಟೀಲ್‌ರವರು ಸಭೆಯಿಂದ ಹೊರಕ್ಕೆ ನಡೆದರು)

ಅಧ್ಯಕ್ಷರು: ತಾವು ಸಭೆಯಿಂದ ಹೊರಕ್ಕೆ ಹೋಗುವ ಉದ್ದೇಶದಿಂದ ಆ ಪ್ರಶ್ನೆ ಕೇಳುತ್ತಿರುವುದು.

9. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ವಿಧೇಯಕ, ಪ್ರವಾಹ ಬರಗಾಲ ಉತ್ತರ ಕರ್ನಾಟಕದ ಅಭಿವೃದ್ಧಿ ಇವುಗಳಲ್ಲಿ ಯಾವುದು ಚರ್ಚೆಯಾಗಬೇಕೆಂಬುದರ ಬಗ್ಗೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲ ಅನರ್ಹತೆ ತಡೆಗಟ್ಟುವ ತಿದ್ದುಪಡಿ ವಿಧೇಯಕ 2006ನ್ನು ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್ಪರಿಗಣನೆಗೆ ಹಿಂದಿರುಗಿಸಲ್ಪಟ್ಟ 2006ನೇ ಸಾಲಿನ ಕರ್ನಾಟಕ ವಿಧಾನ ಮಂಡಲ ಅನರ್ಹತೆಯನ್ನು ತಡೆಗಟ್ಟುವ ತಿದ್ದುಪಡಿ ವಿಧೇಯಕವನ್ನು ತಾವು ಪರ್ಯಾಲೋಚನೆಗಾಗಿ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.